


## ನಾಂದಿಪದ


# ಮಾತು ಕಥೆಯಾಗಿ, ಗದ್ಯ ಹೃದ್ಯವಾಗಿ...

ನಾಡಿನ ಅತ್ಯುತ್ತಮ ಕವಿ ಕಥೆಗಾರರ ರಚನೆಗಳ ಪ್ರಕಟಣೆಯ ಮೂಲಕ ಸಹೃದಯರ ಓದಿಗೆ 'ಮಯೂರ' ನಿರಂತರವಾಗಿ ರಸಕವಳ ಪೂರೈಸುತ್ತಿದೆ. ಕಥೆ-ಕವಿತೆಗಳ ಜೊತೆಗೆ, ಲೇಖನ, ಸಂದರ್ಶನ, ವಿಮರ್ಶೆಗಳ ಮೂಲಕ ಕನ್ನಡ ಸಾಂಸ್ಕೃತಿಕ ಲೋಕ ಮತ್ತು ಓದುಗರ ನಡುವೆ ಸಂವಹನ ರೂಪಿಸುವ ಕೆಲಸವನ್ನೂ ಪ್ರಜ್ಞಾಪೂರ್ವಕವಾಗಿ ಮಾಡುತ್ತಿದೆ. 'ಮಯೂರ'ದ ಇತ್ತೀಚಿನ ಸಂಚಿಕೆಗಳಲ್ಲಿನ ಸಂದರ್ಶನಗಳು ಸಹೃದಯರ ನಡುವೆ ಚರ್ಚೆಗೆ ಕಾರಣವಾಗಿವೆ; ಹೊಸ ನೋಟಗಳಿಗೆ ಕಿಡಿಗಳಾಗಿವೆ. ಇಂಥ ವಿಶಿಷ್ಟ 'ಮಾತು-ಕತೆ'ಗಳ ಸಾಲಿನಲ್ಲಿ ಪ್ರಸಕ್ತ ಸಂಚಿಕೆಯ ಎರಡು ವಿಶಿಷ್ಟ ಸಂದರ್ಶನಗಳನ್ನು ಗಮನಿಸಬಹುದು.

ಶಿಲ್ಪಾ ಮುಡಬಿ ಹಾಗೂ ನರ್ತಕಿ ನಟರಾಜ್ ತಂತಮ್ಮ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ ಅಸಾಧಾರಣವಾದುದು. ಮೂಲತಃ ಹಾಡುಗಾರ್ತಿಯಾದರೂ, ಶಿಲ್ಪಾ ಅವರದು ಸಾಮಾಜಿಕ ಕಾರ್ಯಕರ್ತೆಯ ಮನಸು. ಸಂಗೀತದ ಮೂಲಕ ಸಮಾಜದ ಅಂತರಂಗವನ್ನು ಅರಿಯುವ ಸೃಜನಶೀಲ ಪ್ರಯತ್ನದಲ್ಲಿರುವ ಅವರು, ಜನಸಾಮಾನ್ಯರು ಹಾಗೂ ಜನಪದರ ಬದುಕಿನ ಪಸೆಯನ್ನು ಗುರ್ತಿಸುವ ಮತ್ತು ಹೆಚ್ಚಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನರ್ತಕಿ, ಭರತನಾಟ್ಯ ಕ್ಷೇತ್ರದ ಘನತೆಯನ್ನು ಎತ್ತರಕ್ಕೇರಿಸಿರುವ ಅನುಪಮ ಕಲಾವಿದೆ. ಬದುಕಿನ ಸಂಕಟಗಳಿಗೆ ಕಲೆಯ ಮೂಲಕ ಉತ್ತರ ಕಂಡುಕೊಂಡಿರುವ ಅವರ ಯಶೋಗಾಥೆಗೆ ಸಾಮಾಜಿಕ ಪಥ್ಯದ ರೂಪದಲ್ಲಿ ಮಹತ್ವವಿದೆ. ಈ ಎರಡು ಸಂದರ್ಶನಗಳು ಬದುಕಿನ ಘನತೆ ಮತ್ತು ಸಾರ್ಥಕತೆಯ ಸ್ವರೂಪವನ್ನು ನಮ್ಮ ಗಮನಕ್ಕೆ ತರುವಂತಿವೆ ಹಾಗೂ ಕಲೆಗಿರುವ ಔಷಧಿಗುಣವನ್ನು ಕಾಣಿಸುವಂತಿವೆ. ನೋಮ್ ಚಾಮ್‌ಸ್ಕಿ ವಿಚಾರಗಳ ಕುರಿತ ಬರಹ ಈ ಸಂಚಿಕೆಯ ಮತ್ತೊಂದು ವಿಶೇಷ. ವಿಶ್ವದ ಮಹಾನ್ ಚಿಂತಕನ ವಿಚಾರಗಳನ್ನು ಆಸಕ್ತರಿಗೆ ಸರಳವಾಗಿ ಮುಟ್ಟಿಸುವ ಪ್ರಯತ್ನದ ಈ ಲೇಖನ, ಕನ್ನಡದ ಈಹೊತ್ತಿನ ತುರ್ತುಗಳಿಗೆ ಚೋಮ್‌ಸ್ಕಿ ಚಿಂತನೆಯಲ್ಲಿ ಇರಬಹುದಾದ ಹೊಳಹುಗಳನ್ನು ಸೂಚಿಸುವಂತಿದೆ.

ಇದು ವರ್ಷದ ಕೊನೆಯ ಸಂಚಿಕೆ. 'ಮಯೂರ'ದ ಪಾಲಿಗೆ ಪ್ರತಿ ಸಂಚಿಕೆಯೂ ವಿಶೇಷವೇ. ಈ ವರ್ಷಾಂತ್ಯ ಸಂಚಿಕೆ ಗದ್ಯಗಂಧಿಯಾಗಿದೆ. ಸಂದರ್ಶನ, ಲೇಖನಗಳ ಜೊತೆಗೆ ಒಟ್ಟುಗೂಡಿರುವ ವಿಶಿಷ್ಟ ಕಥೆಗಳು ಬದುಕಿನ ಏಕತಾನತೆಯ ಪಯಣಕ್ಕೆ ಜೀವಂತಿಕೆಯ ಇಂಧನ ತುಂಬುವಂತಿವೆ. ಈ ಇಂಧನವೆನ್ನುವ ಸ್ಪಂದನ ನಿಮ್ಮ ಕಡೆಯಿಂದಲೂ ನಾವು ನಿರೀಕ್ಷಿಸುತ್ತೇವೆ. ಮತ್ತಷ್ಟು ಸುಂದರ, ಅರ್ಥಪೂರ್ಣ ಹಾಗೂ ಪ್ರಯೋಗಶೀಲ ಸಂಚಿಕೆಗಳು ರೂಪುಗೊಳ್ಳುವಲ್ಲಿ ನಿಮ್ಮ ಟೀಕೆ ಟಿಪ್ಪಣಿಗಳಿಗೆ ವಿಶೇಷ ಪಾತ್ರವಿದೆ.

**ಮಯೂರ ಬಳಗ**
**editormy@mayura.co.in**



ಕಲೆ: ವೀರೇಶ ರುದ್ರಸ್ವಾಮಿ